ಮಾಡಬೇಕು. ಶ್ರೀಮಾನ್ ಬಚ್ಚೇಗೌಡರು ಹೇಳಿದ ಹಾಗೆ ಐಎಎಸ್ ಅಧಿಕಾರಿಗಳು, ಮಂತ್ರಿಗಳು, ಶಾಸಕರು ಇದನ್ನು ಹೇಳಿ ನಾವು ತಪ್ಪಿಸಿಕೊಳ್ಳುವುದಕ್ಕೆ ಬದಲು ಈ ಕ್ರೇಜ್‌ಗೆ ಕಡಿವಾಣ ಹಾಕುವುದಕ್ಕೆ ಪರಿಹಾರ ಏನು? ಇಂಗ್ಲೀಷ್ ಮೀಡಿಯಂ ಬೇಕೆ ಬೇಕೆಂದು ನಾವು ಒಪ್ಪಿಕೊಂಡಿದ್ದೇವೆ. ಎಷ್ಟರ ಮಟ್ಟಿಗೆ? ಬೆಂಗಳೂರವರು ಬೇಕು ಚೈನಾದವರಿಗೆ ಸಾಫ್ಟ್‌ವೇರ್‌ಗೆ, ಯಾಕೆಂದರೆ ಇಂಗ್ಲೀಷ್ ಕಲಿತಿದ್ದಾರೆಂದು ಹೀಗಿದ್ದಾಗ ನೀವು ದೃಢ ನಿರ್ಧಾರ ಮಾಡಿ. either deny English medium to all these rich people or allow English medium to poor people also. ಏನು ಡಿಸಿಷನ್ ತೆಗೆದುಕೊಳ್ಳುತ್ತೀರಿ?

MR.SPEAKER: Time is already over. ನಾನು ಮುಂದಿನ ಪ್ರಶ್ನೆ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಹೆಚ್.ವಿಶ್ವನಾಥ್: ತೆಗೆದುಕೊಳ್ಳುವುದಕ್ಕೆ ಆಗದೇ ಇರುವ ತೀರ್ಮಾನ. ಹೇಳುವುದು ಬಹಳ ಸುಲಭ. ಜನ ತಂತ್ರ ವ್ಯವಸ್ಥೆಯಲ್ಲಿ ಅನುಷ್ಠಾನಕ್ಕೆ ಬರುವುದು. ಬಹಳ ಕಷ್ಟ ಇದೆ. ಇಂಗ್ಲೀಷ್ ಬೇಡವೆಂದರೆ ನೀವು ಒಪ್ಪಬಹುದು, ನಾನು ಒಪ್ಪಬಹುದು. ನಿಮ್ಮ ಮನೆ ಹೆಂಡತಿ ಒಪ್ಪುವುದಿಲ್ಲ. ಭಾಷಾ ನೀತಿಯನ್ನು ಏಕಾ ಏಕಿ ನಾನು ಬೆಂಗಳೂರಿಗೆ ವಿತ್‌ಡ್ರಾ ಮಾಡುತ್ತೇನೆಂದು ಹೇಳುವುದಕ್ಕೆ ಬರುವುದಿಲ್ಲ. ಸರ್ಕಾರಿ ಶಾಲೆಯನ್ನು ಸಕಾರಾತ್ಮಕ ದೃಷ್ಟಿಯಿಂದ ನೋಡಿದಾಗ ಮಾತ್ರ ಕಾನ್ವೆಂಟ್ ಕ್ರೇಜ್ ಹೋಗುತ್ತದೆ ಎಂದು ನಾನು ಈ ಸದನದ ಮೂಲಕ ಚುನಾಯಿತ ಪ್ರತಿನಿಧಿಗಳಲ್ಲಿ ಮತ್ತು ಸಾರ್ವಜನಿಕರಲ್ಲಿ ವಿನಂತಿ ಮಾಡುತ್ತಿದ್ದೇನೆ. ಅದಕ್ಕೋಸ್ಕರ ಸರ್ಕಾರ ಹಲವಾರು ಸುಧಾರಿತ ಕಾರ್ಯಕ್ರಮಗಳನ್ನು ತರುವುದರ ಮೂಲಕ ಸರ್ಕಾರಿ ಶಾಲೆಗಳನ್ನು ಆಕರ್ಷಣೀಯ ಕೇಂದ್ರವನ್ನಾಗಿ ಮಾಡುವುದಕ್ಕೆ ಪ್ರಾರಂಭ ಮಾಡಿದ್ದೇವೆ.

ಶ್ರೀ ಕೆ.ಎಂ.ಕೃಷ್ಣಮೂರ್ತಿ: ಪರಿಹಾರ ಹುಡುಕಬೇಕು. ಮಾನ್ಯ ಮಂತ್ರಿಗಳು ಪರಿಹಾರ ಹೇಳಬೇಕು.

ಅಧ್ಯಕ್ಷರು: ನಾನು ಕಂಪೆಲ್ ಮಾಡುವುದಕ್ಕಾಗುವುದಿಲ್ಲ. I cannot compel a Minister to answer like this or that. I am helpless. Next question Mr.Mallikarjun.

ಗ್ರಂಥಾಲಯ ಕರ ವಸೂಲಿ ಬಗ್ಗೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 23(435)

ಸದಸ್ಯರ ಹೆಸರು: ಶ್ರೀ ಮಲ್ಲಿಕಾರ್ಜುನ ಕೆ.ಬಿ.(ಬೀರೂರು)

ಉತ್ತರಿಸುವ ಸಚಿವರು: ಶ್ರೀ ಬಾಬುರಾವ್ ಚವ್ವಾಣ್(ವಯಸ್ಕರ ಶಿಕ್ಷಣ, ಗ್ರಂಥಾಲಯ ಹಾಗು ಮುದ್ರಣ ಮತ್ತು ಲೇಖನ ಸಾಮಗ್ರಿ ರಾಜ್ಯ ಸಚಿವರು)

ಪ್ರಶ್ನೆ

ಅ) 1999-2000 ಮತ್ತು 2000-01ರಲ್ಲಿ ಕರ್ನಾಟಕ ಸರ್ಕಾರಕ್ಕೆ ಎಷ್ಟು ಗ್ರಂಥಾಲಯ ಕರ ವಸೂಲಾಗಿರುತ್ತದೆ; (ಜಿಲ್ಲಾವಾರು ವಿವರ ನೀಡುವುದು)

ಆ) ಹಾಗಿದ್ದಲ್ಲಿ ಈ ಹಣವನ್ನು ಗ್ರಂಥಾಲಯ ಇಲಾಖೆಗೆ ವರ್ಗಾಯಿಸಲಾಗಿದೆಯೇ?

ಇ) ಇಲ್ಲದಿದ್ದಲ್ಲಿ ಈ ಹಣವನ್ನು ಯಾವ ರೀತಿ ವಿನಿಯೋಗಿಸಲಾಗಿದೆ?

ಉತ್ತರ

ಅ) ಗ್ರಂಥಾಲಯ ಕರ ವಸೂಲಾತಿಯ ವಿವರ ಕೆಳಕಂಡಂತಿದೆ

ವರ್ಷ	ಬರಬೇಕಾದ ಕರ	ಬಂದಿರುವ ಕರ	ಬಾಕಿ
		(ರೂ.ಲಕ್ಷಗಳಲ್ಲಿ)	
1999-2000	857.99	478.69	379.30
2000-2001	1341.72	729.39	612.33
ಒಟ್ಟು ರೂ.	2199.71	1208.08	991.63

ಗ್ರಂಥಾಲಯ ಕರ ವಸೂಲಾತಿಯ ಜಿಲ್ಲಾವಾರು ವಿವರಗಳನ್ನು ಅನುಬಂಧ-1 ಮತ್ತು 2ರಲ್ಲಿ ಒದಗಿಸಿದೆ.

ಆ) ರೂ.1208.08 ಲಕ್ಷಗಳನ್ನು ಗ್ರಂಥಾಲಯ ಇಲಾಖೆಗೆ ವರ್ಗಾಯಿಸಿದೆ. ರೂ.991.63 ಲಕ್ಷಗಳನ್ನು ಇಲಾಖೆಗೆ ಬರಬೇಕಾದ ಬಾಕಿ ಇರುತ್ತದೆ.

ಇ) ಗ್ರಂಥಾಲಯ ಕರದ ಹಣವನ್ನು ಪುಸ್ತ ಪತ್ರಿಕೆ, ನಿಯತಕಾಲಿಕೆ, ಪೀಠೋಪಕರಣ, ವಿದ್ಯುಚ್ಛಕ್ತಿ ಕಟ್ಟಡ ಬಾಬ್ತುಗಳಿಗೆ ವಿನಿಯೋಗಿಸಲಾಗುತ್ತಿದೆ.

ಅನುಬಂಧ-1

ನಗರ ಕೇಂದ್ರ ಗ್ರಂಥಾಲಯಗಳಲ್ಲಿ ಪಸೂಲಾಗಿರುವ ಗ್ರಂಥಾಲಯ ಕರದ ಲ್ಲಾವಾರು ವಿವರಗಳು.

(ರೂ.ಲಕ್ಷಗಳಲ್ಲಿ)

ಕ್ರ. ಸಂ.	ಜಿಲ್ಲೆಗಳ ಹೆಸರು	1999-2000 ಸಂದಾಯ	2000-01 ಸಂದಾಯ
1.	ಬೆಂಗಳೂರು ದ.ವಲಯ	56.00	95.00
2.	ಬೆಂಗಳೂರು ಕೇ.ವಲಯ	56.00	95.00
3.	ಬೆಂಗಳೂರು ಉ.ವಲಯ	56.00	95.00
4.	ಬೆಂಗಳೂರು ಪೂರ್ವ ವಲಯ	56.00	95.00
5.	ಬೆಂಗಳೂರು ಪ.ವಲಯ	56.00	95.00
6.	ಕೆ.ಜಿ.ಎಫ್	0.05	
7.	ತುಮಕೂರು	2.16	2.92
8.	ಶಿವಮೊಗ್ಗ	0.25	7.08
9.	ದಾವಣಗೆರೆ	3.06	5.73
10.	ಮೈಸೂರು	15.36	31.00
11.	ಹಾಸನ	1.12	
12.	ಮಂಗಳೂರು	22.87	18.34
13.	ಮಂಡ್ಯ	-	-
14.	ಬೆಳಗಾವಿ	17.09	13.93

15.	ಬಿಜಾಪೂರ	7.84	5.08
16.	ಧಾರವಾಡ	12.00	16.00
17.	ಗುಲ್ಬರ್ಗಾ	5.32	3.28
18.	ಬಳ್ಳಾರಿ	2.63	2.26
19.	ರಾಯಚೂರು	–	–
	ಒಟ್ಟು	369.75	580.59

ಅನುಬಂಧ-2

ಜಿಲ್ಲಾ ಕೇಂದ್ರ ಗ್ರಂಥಾಲಯಗಳಲ್ಲಿ ವಸೂಲಾಗಿರುವ ಗ್ರಂಥಾಲಯ ಕರದ ಜಿಲ್ಲಾವಾರು ವಿವರಗಳು.

(ರೂ.ಲಕ್ಷಗಳಲ್ಲಿ)

ಕ್ರ. ಸಂ.	ಜಿಲ್ಲೆಗಳ ಹೆಸರು	1999-2000 ಸಂದಾಯ	2000-01 ಸಂದಾಯ
1.	ಬೆಂಗಳೂರು ನಗರ ಜಿಲ್ಲೆ	38.24	66.38
2.	ಬೆಂಗಳೂರು ಗ್ರಾಮಾಂತರ	1.88	3.86
3.	ಕೋಲಾರ	1.61	2.54
4.	ತುಮಕೂರು	3.16	3.48
5.	ಚಿತ್ರದುರ್ಗ	3.69	0.73
6.	ಶಿವಮೊಗ್ಗ	1.89	3.45
7.	ಮೈಸೂರು	3.72	0.76
8.	ಮಂಡ್ಯ	13.04	14.84
9.	ಹಾಸನ	2.03	-
10.	ಚಿಕ್ಕಮಗಳೂರು	4.37	2.96
11.	ಮಡಿಕೇರಿ	2.00	0.23
12.	ಮಂಗಳೂರು	9.0	7.95
13.	ಬೆಳಗಾವಿ	7.19	7.69
14.	ಧಾರವಾಡ	4.89	0.84

15.	ಕಾರವಾರ	0.45	7.09
16.	ಬಿಜಾಪೂರ	5.26	0.98
17.	ಗುಲ್ಬರ್ಗಾ	0.61	0.82
18.	ಬಳ್ಳಾರಿ	2.40	2.65
19.	ಬೀದರ್	1.20	1.49
20.	ರಾಯಚೂರು	1.81	3.78
21.	ಹಾವೇರಿ	–	1.75
22.	ಗದಗ	–	1.32
23.	ಬಾಗಲಕೋಟೆ	–	–
24.	ಕೊಪ್ಪಳ	–	–
25.	ಉಡುಪಿ	–	8.25
26.	ಚಾಮರಾಜನಗರ	–	4.96
27.	ದಾವಣಗೆರೆ	–	–
	ಒಟ್ಟು	108.94	148.80

ಶ್ರೀ ಕೆ.ಬಿ.ಮಲ್ಲಿಕಾರ್ಜುನ್: ಅಧ್ಯಕ್ಷರೆ, ಮಂತ್ರಿಗಳು ನನ್ನ ಪ್ರಶ್ನೆಗೆ ಉತ್ತರವನ್ನು ಒದಗಿಸಿದ್ದಾರೆ, ಗ್ರಂಥಾಲಯ ಕರ ವಸೂಲಿಯಲ್ಲಿ ಬಹಳ ತಾರತಮ್ಯ ನಡೆದಿದೆ. ಎಷ್ಟು ಹಣ ವಸೂಲಿ ಆಗಬೇಕಾಗಿದೆ ಅಷ್ಟು ಹಣ ವಸೂಲಿ ಆಗಿಲ್ಲ. ಸ್ಥಳೀಯ ಸಂಸ್ಥೆಗಳಿಂದ ಎಷ್ಟು ಕರವನ್ನು ಗ್ರಂಥಾಲಯ ಕರ ಎಂದು ವಸೂಲಿ ಮಾಡಿದ್ದಾರೆ ಅದು ಗ್ರಂಥಾಲಯ ಇಲಾಖೆಗೆ ಎಷ್ಟೆಷ್ಟು ವರ್ಗಾವಣೆ ಆಗಿದೆ ಎಂದು ಕೇಳಿದ್ದೆ ಸ್ಪಷ್ಟವಾದ ಮಾಹಿತಿ ನೀಡಿಲ್ಲ. ಉತ್ತರದಲ್ಲಿ 2000-01ನೇ ಇಸವಿಯಲ್ಲಿ ಮೈಸೂರು ಜಿಲ್ಲೆಯಲ್ಲಿ 82,000 ವಸೂಲಿ ಆಗಿದೆ. ಈ ರೀತಿ ಸ್ಥಳೀಯ ಸಂಸ್ಥೆಗಳಿಂದ ಕರ ಏಕೆ ವಸೂಲಿ ಆಗಿಲ್ಲ ಎನ್ನುವುದು ಮೊದಲನೇ ಪ್ರಶ್ನೆ. ಈ ವ್ಯತ್ಯಾಸ ಏಕೆ ಎಂದು ಹೇಳಬೇಕಾಗುತ್ತದೆ. ಎರಡನೆಯದಾಗಿ, ಬಾಕಿ ಇರುವ ಗ್ರಂಥಾಲಯ ಕರವನ್ನು ಯಾವಾಗ ವಸೂಲಿ ಮಾಡಲಾಗುತ್ತದೆ. ಮೂರನೆಯದಾಗಿ, ಈ ಗ್ರಂಥಾಲಯ ಕರವನ್ನು ಯಾವ ಯಾವ ಜಿಲ್ಲೆಗೆ ಎಷ್ಟೆಷ್ಟು ವಿನಿಯೋಗ ಮಾಡಿದ್ದೀರಿ? ಎಷ್ಟು ಹಣ ವಸೂಲು ಮಾಡಿದ್ದಾರೆ, ಅಷ್ಟು ಹಣ ಆ ಜಿಲ್ಲೆಗೆ ವಿನಿಯೋಗ ಆಗಿದೆಯೇ? ಎಂದು ಮಾಹಿತಿ ಕೊಟ್ಟಿಲ್ಲ. ಪೂರ್ಣ ಮಾಹಿತಿ ಕೊಡಬೇಕಾಗುತ್ತದೆ. ನನ್ನ ಪರಿಸ್ಥಿತಿ ಏನಾಗಿದೆ ಎಂದರೆ, ಮನೆಗೆ ಮೊದಲ ಮಗನಾಗಿ ಹುಟ್ಟಬಾರದು, ವಿಧಾನ ಸಭೆಯಲ್ಲಿ ಕೊನೆ ಪ್ರಶ್ನೆ ಕೇಳುವವರಾಗಬಾರದು.

Mr.SPEAKER: Then I will do one thing. From tomorrow I will put only ten questions.

ಶ್ರೀ ಕೆ.ಬಿ.ಮಲ್ಲಿಕಾರ್ಜುನ್:- ಅದು ತಮ್ಮ ಇಷ್ಟ ಸಾರ್. ಮೊದಲಿನ ಪ್ರಶ್ನೆಗಳಿಗೆ ಅರ್ಧ ಗಂಟೆ ಕಾಲ ತೆಗೆದುಕೊಳ್ಳಲಾಗಿದೆ. ರಾಜಾರಾಂ ಮೋಹನರಾಯ್ ಪ್ರತಿಷ್ಠಾನದಿಂದ ಸುಮಾರು ಹಣ ಬಂದಿದೆ, ಅದು ಇವತ್ತಿನವರೆಗೂ ನಮ್ಮ ರಾಜ್ಯದಲ್ಲಿ ಖರ್ಚಾಗಿಲ್ಲ. ಅದಕ್ಕೋಸ್ಕರ ಗ್ರಂಥಾಲಯ ಕರವನ್ನು ಅದಕ್ಕೆ ಎಷ್ಟು ವಿನಿಯೋಗ ಮಾಡಿ ರಾಜಾರಾಂ ಮೋಹನ್‌ರಾಯ್ ಪ್ರತಿಷ್ಠಾನದಿಂದ ಖರ್ಚು ಮಾಡಿದ್ದೀರಿ ಎಂದು ಕೇಳುತ್ತಿದ್ದೇನೆ. ಪುಸ್ತಕ ಖರೀದಿಯಲ್ಲಿ ಆಂಗ್ಲ ಭಾಷೆ ಪುಸ್ತಕ ಎಷ್ಟು ಖರೀದಿ ಮಾಡಿದ್ದೀರಿ? ಕನ್ನಡ ಪುಸ್ತಕವನ್ನು ಎಷ್ಟು ಖರೀದಿ ಮಾಡಿದ್ದೀರಿ ಎನ್ನುವ ಉತ್ತರವನ್ನು ಅಪೇಕ್ಷೆ ಮಾಡುತ್ತಿದ್ದೇನೆ.

ಶ್ರೀ ಬಾಬುರಾವ್ ಚವಾಣ್: ಮಾನ್ಯ ಶಾಸಕರು ಎರಡು ವರ್ಷಗಳ ಕರದ ಬಗ್ಗೆ ಕೇಳಿದ್ದಾರೆ. ಅದು 1999-2000 ಹಾಗೂ 2000-01ನೇ ಸಾಲಿನ ಕರದ ವಿಚಾರವಾಗಿದೆ. ನಮ್ಮ ಇಲಾಖೆಗೆ ಆ ಎರಡು ವರ್ಷಗಳಿಗೆ ಸಂಬಂಧಪಟ್ಟಂತೆ ಒಟ್ಟು 21 ಕೋಟಿ 99 ಲಕ್ಷ ರೂಪಾಯಿಗಳು ವಸೂಲಾಗಬೇಕಾಗಿತ್ತು. ಇದರಲ್ಲಿ 12 ಕೋಟಿ 8 ಲಕ್ಷ ರೂಪಾಯಿಗಳು ವಸೂಲಾಗಿದ್ದು ಇನ್ನೂ 9 ಕೋಟಿ 91 ಲಕ್ಷ ರೂಪಾಯಿಗಳು ಡ್ಯೂ ಇದೆ. ಈ ಬಾಕಿಯನ್ನು ವಸೂಲು ಮಾಡುವ ಬಗ್ಗೆ ಚರ್ಚಿಸಲು ದಿನಾಂಕ

5-10-2001ರಂದು ಮೀಟಿಂಗ್ ಕೂಡ ಮಾಡಿದ್ದೇನೆ. ಇದರಲ್ಲಿ ಎಲ್ಲಾ ಮಹಾನಗರಪಾಲಿಕೆಯ ಹಾಗೂ ಪುರಸಭೆಯ ಅಧಿಕಾರಿಗಳನ್ನು ಕರೆದು ಮಾತನಾಡಿದ್ದೇನೆ. ಬರತಕ್ಕಂಥ ಹಣವನ್ನು ನಮ್ಮ ಇಲಾಖೆಗೆ ನೇರವಾಗಿ ಬೇಗನೆ ಕೊಡುತ್ತಿಲ್ಲ. ಆದುದರಿಂದ ಇನ್ನು ಮುಂದೆ ಬೇಗ ಕೊಡಬೇಕೆಂದು ಕೇಳಿಕೊಂಡಿದ್ದೇನೆ. ಬಾಕಿಯನ್ನು ವಸೂಲು ಮಾಡಲು ಪ್ರಯತ್ನ ಮಾಡುತ್ತಿದ್ದೇನೆ.

ಶ್ರೀ ಕೆ.ಬಿ.ಮಲ್ಲಿಕಾರ್ಜುನ್: ಈಗ ವಸೂಲಾಗಿರುವ ಹಣವನ್ನು ಯಾವ ಯಾವ ಜಿಲ್ಲೆಗೆ ವಿನಿಯೋಗ ಮಾಡಿದ್ದೀರಿ ಎಂಬ ಬಗ್ಗೆ ಹೇಳಬೇಕು. ಇನ್ನು ರಾಜಾರಾಮ್ ಮೋಹನ್‌ರಾಯ್ ಪ್ರತಿಷ್ಠಾನದಿಂದ ಕಟ್ಟಡವನ್ನು ಕಟ್ಟುವುದಕ್ಕೆ ಬಂದಿರತಕ್ಕಂಥ ಹಣ ವಿನಿಯೋಗವಾಗಿಲ್ಲ, ಈ ಕರದಿಂದ ಅದಕ್ಕೆ ಮ್ಯಾಚಿಂಗ್ ಗ್ರ್ಯಾಂಟ್ ಕೊಡುವುದಕ್ಕೆ ಸಾಧ್ಯವಿದೆಯೇ ಎಂಬ ಬಗ್ಗೆ ಹೇಳಬೇಕು. ಇನ್ನು ಇಂಗ್ಲೀಷ್ ಪುಸ್ತಕವನ್ನು ಗ್ರಂಥಾಲಯ ಪ್ರಾಧಿಕಾರದಿಂದ ಏಕೆ ಖರೀದಿ ಮಾಡುತ್ತಿದ್ದೀರಿ ಎಂಬ ಬಗ್ಗೆ ಹೇಳಬೇಕು.

ಶ್ರೀ ಬಾಬುರಾವ್ ಚವಾಣ್: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗೆ ಅಚ್ಚಕಟ್ಟಾದ ಉತ್ತರವನ್ನು ಕೊಟ್ಟಿದ್ದೇವೆ. ಈಗ ಇವರು ಸಪ್ಲಿಮೆಂಟರಿ ಪ್ರಶ್ನೆಯನ್ನು ಏನು ಕೇಳಿದ್ದಾರೆ ಅದಕ್ಕೆ ಉತ್ತರ ತರಿಸಲು ನನಗೆ ಕಾಲಾವಕಾಶ ಬೇಕು. ಇನ್ನು ರಾಜಾರಾಮ್ ಮೋಹನ್‌ರಾಯ್ ಲೈಬ್ರರಿ ಬಗ್ಗೆ ಸದಸ್ಯರು ಏನು ಹೇಳಿದ್ದಾರೆ. ಈಗ ಅನುದಾನ ಪಡೆದ ಗ್ರಂಥಾಲಯಕ್ಕೆ ಕೊಡಲು ನಮ್ಮಲ್ಲಿ ಅನುದಾನ ಇದೆ. ಪ್ರತಿ ಜಿಲ್ಲೆಗೆ 10 ಅನುದಾನಿತ ಗ್ರಂಥಾಲಯಕ್ಕೆ ಅನುದಾನ ಕೊಡಬೇಕು ಎಂದು ಸರ್ಕಾರದ ಚಿಂತನೆ ಇದೆ. ಅರ್ಜಿ ಬಂದರೆ ಪ್ರತಿ ಜಿಲ್ಲೆಗೆ 10 ಅನುದಾನಿತ ಗ್ರಂಥಾಲಯವನ್ನು ಕೊಡುವುದಕ್ಕೆ ಸರ್ಕಾರದ ನಿಲುವು ಏನಿದೆ ಆ ಪ್ರಕಾರ ಕೊಡುತ್ತೇವೆ.

ಬಾಗೇಪಲ್ಲಿ ಕ್ಷೇತ್ರದಲ್ಲಿ ಕುಡಿಯುವ ನೀರಿನ ಸಮಸ್ಯೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 24(718)

ಸದಸ್ಯರ ಹೆಸರು: ಶ್ರೀ ಸಂಪಂಗಿ ಎನ್.(ಬಾಗೇಪಲ್ಲಿ)

ಉತ್ತರಿಸುವ ಸಚಿವರು: ಶ್ರೀ ಎಂ.ವೈ.ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು)

ಪ್ರಶ್ನೆ

ಅ. ಬಾಗೇಪಲ್ಲಿ ವಿಧಾನ ಸಭಾ ಕ್ಷೇತ್ರದಲ್ಲಿನ ಗ್ರಾಮೀಣ ಭಾಗದಲ್ಲಿ ಕುಡಿಯುವ